ಇಷ್ಟೂ ದಿನ ರಾಕ್ಷಸಿಯಂತೆ ದಿನಕ್ಕೆ ಹದಿನೆಂಟು ಗಂಟೆ ದುಡಿಯುತ್ತಿದ್ದವಳಿಗೆ ಈ ಹೊಸ ಕೆಲಸ ಮಹಾಬೋರು. ಆದರೂ ದಿನಕ್ಕೆ ಅಷ್ಟು ಗಂಟೆಗಳಂತೆ ಐದಾರು ವರ್ಷ ದುಡಿಯುವ ಹಣವನ್ನು ನಾನೀಗ ಹತ್ತು ತಿಂಗಳಿನಲ್ಲಿ ದುಡಿಯುತ್ತೇನೆ ಎಂದು ತನ್ನ ಬಗ್ಗೆಯೇ ತನಗೆ ಅಪಾರ ಹೆಮ್ಮೆಯಾಯಿತು. ಹೀಗೆ ಏನಾದರೊಂದು ಯೋಚನೆ ತಲೆಗೆ ಹೊಕ್ಕ ಕೂಡಲೇ ಹೊಟ್ಟೆಯೊಳಗಿನ ಮೀನು ಪುಳಕ್ಕನೆ ಸರಿದು ಇವಳಿಗೆ ಎಚ್ಚರಾಗುತ್ತದೆ.

ಏಳು ಇನ್ನೇನು ತುಂಬುವುದರಲ್ಲಿತ್ತು. ಎದುರಿನ ಟೀಪಾಯಿಯ ಮೇಲೆ ಕಾಲುಚಾಚಿ ಗ್ರೀನ್ ಟೀ ಹೀರುತ್ತಾ ಹಾಯ್ ಎನಿಸಿ ಟೀವಿ ಹಚ್ಚಿದಳು. ಜಾಕಿ ಚಾನ್‌ನ ಸಿನಿಮಾ ಓಡುತ್ತಿತ್ತು. ಅವನು ಇಪ್ಪತ್ತೈದು ಮಹಡಿಯಿಂದ ಹಾರುವುದನ್ನು ಅವುಡುಗಚ್ಚಿ ನೋಡುತ್ತಿದ್ದವಳು, ಇನ್ನೇನು ನೆಲಕ್ಕಪ್ಪಳಿಸಿದನೆಂದು ಗಾಬರಿಯಲ್ಲಿ ಸರಕ್ಕನೆ ಕಾಲು ಮುದುರಿದಳು. ಕೈಲಿದ್ದ ಟೀ ಎದೆ–ಹೊಟ್ಟೆಯ ಮೇಲೆಲ್ಲಾ ಚೆಲ್ಲಿತು. ಬಿಸಿ ತಾಳದೆ 'ಆಂಟೀ... ಕ್ರಿಸ್ಟಿ ಆಂಟೀ...' ಎಂದು ಕೂಗಿದಳು.

ಕ್ರಿಸ್ಟಿ ಒಳಗೆ ಬಂದವಳೇ 'ನಿನಗೇನಾದ್ರೂ ಮೈಮೇಲೆ ಪ್ರಜ್ಞೆ ಇದೆಯೇನೇ ದ್ರಾಬೇ. ಕೂತ್ಕೊಂಡು ತಿಂದುಡು ವಾಲಾಡೋಕೆ ಅಷ್ಟು ದುಡ್ಡು ಕುಕ್ತಾರೆ. ಜೋಪಾನವಾಗಿರೋಕೆ ಏನ್ ದಾಢಿ' ಎನ್ನುತ್ತಾ ಹೆಗಲಮೇಲಿದ್ದ ಟವೆಲ್ಲಿನಿಂದ ಹೊಟ್ಟೆ–ಎದೆಯನ್ನೆಲ್ಲಾ ಒರೆಸಿದಳು. ತಾನೆಷ್ಟು ದೊಡ್ಡ ತಪ್ಪು ಮಾಡಿದೆನೆಂದು ತನುಜಾಳಿಗೆ ಆಗಷ್ಟೇ ಅರಿವಿಗೆ ಬಂತು.

'ಸ್ಸಾರಿ ಆಂಟೀ. ಅದೂ...'

'ಬಾಯಿ ಮುಚ್ಚು ಲೌಡಿ. ನೀವ್ ಮಾಡ್ಕೊಳ್ಳೋ ಒಂದೊಂದು ಎಡವಟ್ಟಿಗೂ ನಾ ಬೈಸಿಕೊಳ್ಳಬೇಕು' ಎಂದು ನೈಟಿ ಬದಲಿಸಿ ಜಿಪ್ ಹಾಕಿ ಮಲಗಿಸಿದಳು. ಏನೇ ಬೈದರೂ ಕ್ರಿಸ್ಟಿ ಆಂಟಿ ಎಂದೂ ತನ್ನ ಕೆಲಸದಲ್ಲಿ ರಾಜಿ ಮಾಡಿಕೊಂಡವಳಲ್ಲ. ವಾಂತಿ ಮಾಡಿಕೊಂಡರೆ ಬಳಿದು ಕ್ಲೀನ್ ಮಾಡುತ್ತಿದ್ದಳು. ಎಣ್ಣೆ ತಿಕ್ಕಿ, ಬೆನ್ನುಜ್ಜಿ ತಲೆಗೆ ಸಾಮ್ರಾಣಿ ಹಾಕುತ್ತಿದ್ದಳು. ಕಾಲೂತ ಬಂದರೆ ಶಾಖ ಕೊಟ್ಟು ನೀವುತ್ತಿದ್ದಳು. ದಿನತುಂಬಿದವರನ್ನಂತೂ ನಿದ್ದೆಗೆಟ್ಟು ಕಾಯುತ್ತಿದ್ದಳು. ಆದರೆ ಮಾಡುವ ಕೆಲಸದಲ್ಲಿ ಅವಳಿಗೆ ಯಾವ ಭಾವನೆಗಳೂ ಇರಲಿಲ್ಲ. ತಾಯಾಗಲಿರುವ ಅಷ್ಟು ಹೆಣ್ಣುಮಕ್ಕಳ ಜೊತೆಯಲ್ಲಿದ್ದು ತಾಯಿಯಂತೆ ಆರೈಕೆ ಮಾಡುತ್ತಿದ್ದವಳು ಅದನ್ನು ತನ್ನ ಕೆಲಸ ಅಂತಷ್ಟೇ ಭಾವಿಸಿದ್ದಳು. ಎಂದಿಗೂ ಯಾರ ಜೊತೆಗೂ ಭಾವನಾತ್ಮಕ ಬಂಧವನ್ನು ಕಟ್ಟಿಕೊಂಡಿರಲಿಲ್ಲ. ತಾನಾಯಿತು ತನ್ನ ಜವಾಬ್ದಾರಿಯಾಯಿತು ಅಷ್ಟೇ.

ಹೀಗೆ ಸಂಬಂಧವೇ ಇಲ್ಲದಂತೆ ಬದುಕಬಹುದಾ? ಅನಿಸಿದರೂ, ಇಲ್ಲಿ ಬರುವ ನಾವೆಲ್ಲರೂ ಹಾಗೇ ಇದ್ದೀವಲ್ಲಾ? ಮತ್ತು ಹಾಗೇ ಇರಬೇಕೆಂಬುದು ತಾನೇ ಈ ಕೆಲಸದ ಮುಖ್ಯ ಕರಾರು? ಎನ್ನುವುದು ನೆನಪಾಯಿತು. ಇಲ್ಲಿ ಹೊಕ್ಕಳ ಬಳ್ಳಿಗಳು ಹುಟ್ಟುತ್ತಲೇ ಮೂಕವಾಗುತ್ತವೆ. ವಾರ–ತಿಂಗಳು ಕಳೆವುದರಲ್ಲಿ ತುಂಬಿದ ಎದೆ ಹಾಲನ್ನು ಕರೆದು ಸಿಂಕಿಗೆ ಚೆಲ್ಲುವುದು



ರೂಢಿಯಾಗಿಬಿಡುತ್ತದೆ. ಆಮೇಲೆ ಎಲ್ಲವೂ ಮಾಮೂಲಿ ಬದುಕಿನಂತಾಗುತ್ತದೆ. ಅಲ್ಲಿಗೆ ಹತ್ತುತಿಂಗಳ ಅಜ್ಞಾತವಾಸ ಕೊನೆಯಾಗುತ್ತದೆ. ನೆಂಟರಿಷ್ಟರಲ್ಲಿ ಕೆಲಸಕ್ಕೆಂದು ದೆಹಲಿಗೆ ಹೋಗಿದ್ದೇನೆ ಎಂದು ಹೇಳಿಕೊಂಡ ಸುಳ್ಳಿಗೆ ತಕ್ಕಂತೆ ಬೇಕಾಗುವ ಹಾಗೆ ಒಂಚೂರು ಹಿಂದಿ ಕಲಿಯಬೇಕು.

ನಿದ್ದೆ ಹತ್ತಿ ಒಂದು ಜಾವ ಕಳೆದಿರಬೇಕಷ್ಟೇ. ಯಾರೋ ಬೋರಲು ಮಲಗಿಸಿ ಬೆನ್ನಿಗೆ ಸುತ್ತಿಗೆಯಿಂದ ಬಡಿಯುತ್ತಿದ್ದಾರೆ. ಕೈ, ಕಾಲು ಅಲ್ಲಾಡಿಸದಂತೆ ಕಟ್ಟಿಹಾಕಿದ್ದಾರೆ. ಉಸಿರುಕಟ್ಟಿ 'ಇನ್ನು ಸತ್ತೇ' ಅನಿಸಿತು, ಕಷ್ಟಪಟ್ಟು ಕತ್ತುಹೊರಳಿಸಿದರೆ ಪ್ರತಾಪ! 'ಬಿಡೂ.. ಬಿಡೋ ನನ್ನ' ಅರಚಲು ಆಗದಂತೆ ಬಾಯಿಗೆ ಬಟ್ಟೆ ತುರುಕಿದ. ಹೆದರಿಕೆ, ನೋವು ತಾಳಲಾರದೇ ಮಲಗಿದ್ದಲ್ಲೇ ಉಚ್ಚೆ ಹೊಯ್ದುಕೊಂಡದ್ದಷ್ಟೇ.

***

ಗ್ಲೂಕೋಸ್ ಬಾಟಲಿ ಬದಲಿಸುತ್ತಿದ್ದ ಪ್ರೇಮಾ ನರ್ಸು 'ಅದೇನು ಹುಡುಗಿಯೇ ನೀನು?' ಎಂದು ಕೊಂಕಾಗಿ ನುಡಿದು ಹೊರಹೋದಳು. ಏನೋ ಎಲ್ಲವೂ ಖಾಲಿ ಖಾಲಿ ಭಾವ. ಪ್ರತಾಪ ಇಂಥವನು ಅಂತ ಯಾವತ್ತೂ ಯೋಚಿಸಿರಲಿಲ್ಲ. ನಾನಾಗೇ ಅವನನ್ನ ಬಯಸಿದ್ದೆ. ಅದ್ಯಾಕೆ ಹೀಗೆ ನಾಯಿಯ ಹಾಗೆ ಮೇಲೆ ಬಿದ್ದ? ಚಿಂತೆಯಲ್ಲಿ ಮಗ್ನಳಾದರೆ, ಹೊಟ್ಟೆ ಅನ್ನೋದು ಮುಸುರೆ ಬಟ್ಟೆ ಎಸೆದ ಹಾಗೆ ಜಾರಿತು.

'ಸೀತಮ್ಮ ಆಂಟೀ... ಪ್ರೇಮಾ ನರ್ಸ್... ಸೀತಮ್ಮಾ ಆಂಟೀ...' ಎಂದು ಕೂಗುತ್ತಾ ಕಾಲಿಂಗ್ ಬೆಲ್ ಒತ್ತೇಹಿಡಿದಳು.

ಒಣಗಿದ್ದ ತುಟಿಯನ್ನು ನಾಲಗೆಯಿಂದ ಸವರಿಕೊಂಡು, 'ಆಂಟೀ, ಮಗುವಾಯ್ತಾ ನಂಗೆ? ಎಲ್ಲಿ ಅದು? ನಂಗೇನೂ ಗೊತ್ತಾಗ್ಲೇ ಇಲ್ಲಾ? ಹೇಗಾಯ್ತು? ಪ್ರತಾಪ ಯಾಕಿಲ್ಲಿ ಬಂದಾ? ಅವನಿಗ್ಯಾರು ಹೇಳಿದ್ದು?'

ಪ್ರೇಮಾ ನರ್ಸ್ ಮುಸಿ ಮುಸಿ ನಗುತ್ತಾ ತಲೆ ಚಚ್ಚಿಕೊಂಡು ಹೊರಹೋದಳು.

'ಅಲ್ವೇ ತನುಜಾ? ನೀ ನಿಜವಾಗ್ಲೂ ಇಷ್ಟು ದಡ್ಡೀನಾ? ಅಥ್ವಾ ದಡ್ಡಿ ಹಾಗೆ ಡ್ರಾಮಾ ಮಾಡ್ತೀಯಾ?' ಸೀತಮ್ಮನ ಧ್ವನಿಯಲ್ಲಿ ಎಂದಿನ ಉಡಾಫೆಯಾಗಲೀ ಧಿಮಾಕಾಗಲೀ ಇರಲಿಲ್ಲ.

ಇವಳ ಕಣ್ಣಿನಿಂದ ನೀರು ತೊಟ್ಟಿಕ್ಕಿ ಹಸಿರು ಗೌನಿನ ಮೇಲೆ ಧಾಳಾಗಿ ಕಾಣುತ್ತಿತ್ತು. ಮುಖ ಕೋಪದಲ್ಲಿ ಅದುರುತ್ತಿತ್ತು.

'ಅಲ್ವೇ, ರಾತ್ರಿ ನಿಂಗೆ ಮಲಗಿದ್ದಲ್ಲೇ ವಾಟರ್ ಡಿಸ್ಚಾರ್ಜ್ ಆಗಿ, ಅರ್ಧ ಗಂಟೆಯಲ್ಲೇ ಸಿಸೇರಿಯನ್ ಮಾಡಿ ಮಗು ತೆಗೆದೆವಲ್ಲೇ? ಡಾಕ್ಟರ್ ಪಾಪ ನಿನ್ನೆ ಇಡೀ ದಿನ ಬ್ಯುಸಿ. ಅಂಥದ್ದರಲ್ಲಿ ರಾತ್ರಿ ನಿನ್ನ ಅವಸ್ಥೆ ಬೇರೆ. ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲವಲ್ಲೇ...'

'ಅದಕ್ಕೇ ಇಂಥಾ ಎಡವಟ್ಟು ಆಗಬಾರದು ಅಂತಲೇ ಡಾಕ್ಟರ್ ಅಷ್ಟು ಲಕ್ಸುರಿ ಹಾಸ್ಟಲ್ ಮಾಡಿಕೊಟ್ಟಿದಾರೆ. ನೆನ್ನೆ ಸಂಜೆ ಚೆಕ್‌ಅಪ್ ಮಾಡಿದಾಗ್ಲೂ ಎಲ್ಲಾ ನಾರ್ಮಲ್ ಇತ್ತಲ್ಲೇ...'

'ನೋಡೀಗ... ಸಿಸೇರಿಯನ್ ಅಂದ್ರೆ ಕಡಿಮೆ ಆಗುತ್ತಾ? ಈಗ ಅದ್ರ ಅಪ್ಪಅಮ್ಮ ಫೋನಿಗೆ ಸಿಗ್ತಾ ಇಲ್ಲ. ಮೇಡಂಗೆ ಎಷ್ಟು ಸಿಟ್ಟು ಬಂದಿದೆ ಗೊತ್ತಾ?'

ತನುಜಾ ಕತ್ತು ತಗ್ಗಿಸಿಯೇ 'ಮಗೂ ಎಲ್ಲಿ?'

'ಎಲ್ಲಾ ಪೇಪರ್ಸು ಸರಿ ಇದ್ದಿದ್ರೆ ಯಾರೂ ಇಷ್ಟು ತಲೆ ಕೆಡಿಸಿಕೊಳ್ತಿರಲಿಲ್ಲ. ಏನೋ ಲೀಗಲ್ಲಾಗಿ ಬಂದ್ರೆ ಜಾಸ್ತಿ ಖರ್ಚಾಗುತ್ತೆ, ನಿಂಗೂ ಜಾಸ್ತಿ ಏನೂ ಸಿಕ್ಕಲ್ಲ ಅಂತ ಮೇಡಂ ನಿನಗೋಸ್ಕರ ಅಷ್ಟು ರಿಸ್ಕ್ ಮೈಮೇಲೆ ಎಳಕೊಂಡ್ರು. ಈಗಿನ್ನೂ ಅರವತ್ತು ಪರ್ಸೆಂಟ್ ಬಾಕಿ ಇದೆ. ಕೊಟ್ಟಿರೋ ನಲವತ್ತು ಬರೀ ನಿನ್ನ ಲಕ್ಸುರಿಗೇ, ಸಿಸೇರಿಯನ್ನಿಗೇ ಆಗೋಯ್ತು. ಪಾಪ, ಈಗ ಅವ್ರೇನ್ ಮಾಡ್ತಾರೋ...'

'ನನ್ನ ಮಗೂ ಎಲ್ಲಿ?' ಎಂದು ಕಿರುಚಿದಳು.

'ಅದಾ, ಪೀಚಲು ಕೋಡಂಗಿಯಂಥ ಮಗೂ ಕಣೆ. ಹುಟ್ಟಿ ಎರಡ್ಮೂರು ನಿಮಿಷ ಇತ್ತೇನೋ. ಕಣ್ ಬಿಟ್ಟಿದ್ದು ನಾನೂ ನೋಡಿದ್ನೇ. ಅಲ್ಲೇ ಇಲ್ಲ! ಅಷ್ಟೇ ಋಣವಿತ್ತೂ ಅಂತ ಕಾಣುತ್ತೆ.'

ಸಣ್ಣಗೆ ಕರೆಂಟು ಬಡಿದ ಹಾಗಾಯಿತು. ಸುಸ್ತೆನಿಸಿ ಹಾಗೇ ದಿಂಬಿಗೆ ಜಾರಿದಳು.

***

ನಸುಗತ್ತಲಲ್ಲಿ ರೂಮಿಗೆ ತಂದು ಎಸೆದಿದ್ದ ಬ್ಯಾಗಿನಿಂದ ಫೋನ್ ರಿಂಗಾಯಿತು. ಬಾಗಿ ಎತ್ತಿಕೊಳ್ಳಲಾಗದಷ್ಟು ಬೆನ್ನು ಹೊಡೆತ. ನಿಧಾನಕ್ಕೆ ಮಂಡಿಯೂರಿ ಕೂತು ಬ್ಯಾಗಿನ ಜಿಪ್ಪು ತೆಗೆದಳು. ಒಂದಾದ ಮೇಲೊಂದರಂತೆ ಪ್ಯಾಡು, ಕಾಂಡೋಮು, ಸ್ಟಿಕ್ಕರು, ಬಳೇಶಾಪಿನಿಂದ ಕೊಂಡ ಕರಿಮಣಿ ಸರ ಎಲ್ಲವೂ ತನ್ನ ಪಾಪಪ್ರಜ್ಞೆಯನ್ನು ಎಚ್ಚರಿಸಲು ಪ್ರಯತ್ನಿಸುವಂತೆ ಕೈಗೆ ಸಿಗುತ್ತಿದ್ದವು. ಪುಟ್ಟ ಪರ್ಸಿನಲ್ಲಿ ಒಂದಷ್ಟು ದುಡ್ಡು, ಜೊತೆಗೆ ಆಧಾರ್ ಕಾರ್ಡ್. ನೋಡಿ ನಗೆಯುಕ್ಕಿ ಬಂತು. ಕ್ಷಣ ಮೈಮರೆತು 'ತನುಜಾ' ಹೆಸರ ಮೇಲೆ ಬೆರಳಾಡಿಸಿದಳು. ತಕ್ಷಣ ಹಾವು ಕಡಿದವಳಂತೆ ಕೈ ಹಿಂದಕ್ಕೆ ಎಳೆಯಿತು. ಸುರುವಿಕೊಂಡಿದ್ದ ವಸ್ತುಗಳನ್ನು ಅಸಡ್ಡೆಯಿಂದ ಪಕ್ಕಕ್ಕೆ ಸರಿಸಿ ಆಳದಲ್ಲೆಲ್ಲೋ ಹೋಗಿ ಕೂತಿದ್ದ ಫೋನ್ ಹುಡುಕಿ ತೆಗೆದರೆ ನರಸಿಂಗಶೆಟ್ರ ಹೆಸರು ಪರದೆಯ ಮೇಲೆ ಕುಣಿಯುತ್ತಿತ್ತು. ■